NOVEMBER 07, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲಿಕರು, ಕಬ್ಬು ಬೆಳೆಗಾರರ ಜೊತೆ, ಇಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ, ಮಹತ್ವದ ಸಭೆ.**
- **ಮೈಸೂರು ಜಿಲ್ಲೆಯಲ್ಲಿ, 91 ಮಕ್ಕಳು, ಅಪೌಷ್ಟಿಕತೆಯಿಂದ ಬಳಲಿಕೆ; ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರ, ಕಳವಳ.**
- **'ವಂದೇ ಮಾತರಂ' ರಾಷ್ಟ್ರೀಯ ಗೀತೆಗೆ, 150 ವ 'ೕ ಪೂರ್ಣ; ರಾಷ್ಟ್ರವ್ಯಾಪಿ ವರ್ಷಪೂರ್ತಿ ಕಾರ್ಯಕ್ರಮಕ್ಕೆ, ಇಂದು ಚಾಲನೆ.**
- **ಇಂದು, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಎಲ್ಲ ಸಕ್ಕರೆ ಕಾರ್ಖಾನೆಗಳ ಮಾಲಿಕರ ಜೊತೆ, ಇಂದು ಬೆಳಗ್ಗೆ 11 ಗಂಟೆಗೆ, ಮಧ್ಯಾಹ್ನ 1 ಗಂಟೆಗೆ, ಕಬ್ಬು ಬೆಳೆಗಾರ ರೈತ ಮುಖಂಡರುಗಳ ಜೊತೆ ಚರ್ಚಿಸಲು, ಸಭೆ ಕರೆದಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಜರುಗಿದ, ಸಚಿವ ಸಂಪುಟ ಸಭೆ ಬಳಿಕ ಮಾತನಾಡಿ, ಎರಡೂ ಸಭೆಯಲ್ಲಿ, ಇಬ್ಬರ ಅಹವಾಲು ಆಲಿಸಿ, ರಾಜ್ಯ ಸರ್ಕಾರ ತನ್ನ ಮಿತಿಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲಿದೆ ಎಂದರು.**

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವನಿ 35 ಸೆಕೆಂದುಗಳು**

<><><>

ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು, ಪ್ರತಿಭಟನೆ ನಡೆಸುತ್ತಿರುವ, ಮಾಹಿತಿ ತಮಗಿದೆ. ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಹಾಗೂ ಸಂಪುಟದ ಸಹೋದ್ಯೋಗಿಗಳು, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮತ್ತು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಇಲಾಖೆಯ ಆಯುಕ್ತರಿಗೆ ಸೂಚನೆಗಳನ್ನು ನೀಡಿ, ರೈತರು ಹಾಗೂ ಕಾರ್ಖಾನೆಗಳ ಮಾಲೀಕರ ಜೊತೆ ಚರ್ಚಿಸಿದ್ದಾರೆ, ಎಂದು, ಮುಖ್ಯಮಂತ್ರಿ ನುಡಿದರು.

<><><>

ರೈತರ ಉತ್ಪನ್ನಕ್ಕೆ, ನ್ಯಾಯಯುತ ಮತ್ತು ಲಾಭದಾಯಕ ಬೆಲೆ, 'ಎಫ್.ಆರ್.ಪಿ' ನಿರ್ಧರಿಸಿರುವುದು, ಕೇಂದ್ರದ ಬಿಜೆಪಿ ಸರ್ಕಾರ. ಸಕ್ಕರೆ ರಫ್ತು ನಿಯಮದಲ್ಲಿ, ಕೇಂದ್ರದ ನೀತಿ ಮತ್ತು ಎಫ್.ಆರ್.ಪಿ ನಿಗದಿಯಲ್ಲಿ, ಕೇಂದ್ರದ ತೀರ್ಮಾನದಿಂದ ಉಂಟಾದ ಸಮಸ್ಯೆ ಕುರಿತು, ಪ್ರಧಾನಮಂತ್ರಿ ಜೊತೆ ಚರ್ಚಿಸಲು, ಸಂಪುಟ ಸಭೆ ನಿರ್ಣಯಿಸಿದೆ ಎಂದು, ಮುಖ್ಯಮಂತ್ರಿ ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ್ದಾರೆ. ಈ ಕುರಿತು, ನಿನ್ನೆ ತಡರಾತ್ರಿ, ಮುಖ್ಯಮಂತ್ರಿ ಪ್ರಧಾನಮಂತ್ರಿಯವರಿಗೆ ಪತ್ರ ರವಾನಿಸಿದ್ದಾರೆ.

<><><>

ಈ ಮಧ್ಯೆ, ಕನ್ನಡಪರ ಸಂಘಟನೆಗಳು ಇಂದು ಕಬ್ಬು ಬೆಳೆಗಾರರನ್ನು ಬೆಂಬಲಿಸಿ, ಬೆಳಗಾವಿ ಬಂದ್‌ಗೆ ಕರೆ ನೀಡಿವೆ.

<><><>

ಮೈಸೂರು ಜಿಲ್ಲೆಯಲ್ಲಿ, 91 ಮಕ್ಕಳು, ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂದು, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ, ಶಶಿಧರ ಕೋಸಂಬೆ, ತಿಳಿಸಿದ್ದಾರೆ. ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ, ಚೆಲುವಾಂಬಾ ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು. ಮುಂಬರುವ 3 ದಿನಗಳಲ್ಲಿ, ಸಂಬಂಧಪಟ್ಟ ಅಧಿಕಾರಿಗಳು, ಅಪೌಷ್ಟಿಕತೆಯಿಂದ ಬಳಲುತ್ತಿರುವ, ಎಲ್ಲ 91 ಮಕ್ಕಳನ್ನು ಗುರುತಿಸಿ, ಪಾಳಿ ವ್ಯವಸ್ಥೆಯಲ್ಲಿ, ಸೂಕ್ತ ಚಿಕಿತ್ಸೆ ನೀಡಿ, ವರದಿ ಸಲ್ಲಿಸುವಂತೆ, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಮಕ್ಕಳ ಅಪೌಷ್ಟಿಕತೆ, ಪುನರ್ವಸತಿ ಕೇಂದ್ರ ಎಂಬ ಫಲಕ ಬದಲಿಸಿ, ಮಕ್ಕಳ ಅಪೌಷ್ಟಿಕತೆ ಪುನಃಶ್ಚೇತನ ಘಟಕ ಎಂದು, ಹೊಸ ನಾಮ ಫಲಕ ಅಳವಡಿಸುವಂತೆ, ಸೂಚಿಸಿದರು.

<><><>

ಗಣಿ ಬಾಧಿತ, ವಿಜಯನಗರ ಜಿಲ್ಲೆ ಸೇರಿದಂತೆ, ರಾಜ್ಯದ 4 ಜಿಲ್ಲೆಗಳ 10ತಾಲೂಕುಗಳಲ್ಲಿ, ಸರ್ಕಾರಿ ಶಾಲಾ ಮಕ್ಕಳಲ್ಲಿ, ಅಪೌಷ್ಟಿಕತೆ ಮತ್ತು ರಕ್ತ ಹೀನತೆ ನಿವಾರಣೆಗೆ, ಬಹುಪೋಷಕಾಂಶ ಪೌಷ್ಟಿಕ ಆಹಾರ ವಿತರಿಸಲು, ಕ್ರಮ ಕೈಗೊಳ್ಳಲಾಗಿದೆ ಎಂದು, ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ತಿಳಿಸಿದ್ದಾರೆ. ಹೊಸಪೇಟೆಯ, ಪುಣ್ಯಮೂರ್ತಿ ರಾಘಪ್ಪ ಶೆಟ್ಟಿ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಗಣಿ ಬಾಧಿತ ಪ್ರದೇಶ ಸಮಗ್ರ ಅಭಿವೃದ್ಧಿ ಯೋಜನೆ ಅಡಿ, ಗಣಿ ಪರಿಸರ ಪುನಃಶ್ಚೇತನ ನಿಗಮ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಬಹುಪೋಷಕಾಂಶ ನ್ಯೂನತೆ ನಿವಾರಣೆ, ಪೌಷ್ಟಿಕ ಆಹಾರದ ಕಿಟ್, ಮಕ್ಕಳಿಗೆ ವಿತರಿಸಿ, ಮಾತನಾಡಿದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಉಣಕಲ್ಲ ಗ್ರಾಮದ, ಐತಿಹಾಸಿಕ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವುದಾಗಿ, ವಿಧಾನಸಭೆ ಉಪ ಸಭಾಧ್ಯಕ್ಷ, ರುದ್ರಪ್ಪ ಲಮಾಣಿ ತಿಳಿಸಿದ್ದಾರೆ. ಹುಬ್ಬಳ್ಳಿ, ಧಾರವಾಡ ಮಹಾನಗರ ಪಾಲಿಕೆ, ಸಭಾ ಭವನದಲ್ಲಿ ಅವರು ಮಾತನಾಡಿದರು. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ನಿರಾಕ್ಷೇಪಣ ಪ್ರಮಾಣ ಪತ್ರ ನೀಡಲು ಒಪ್ಪಿದೆ. ಮುಜರಾಯಿ ಇಲಾಖೆಯ, ಸಿ ವರ್ಗಕ್ಕೆ ಸೇರಿದ, ಚಂದ್ರಮೌಳೇಶ್ವರ ದೇಗುಲವನ್ನು, 25 ಕೋಟಿ ರೂಪಾಯಿ ವೆಚ್ಚದಲ್ಲಿ, ಸಮಗ್ರವಾಗಿ ಅಭಿವೃದ್ಧಿ ಪಡಿಸಲು, ಯೋಜನಾ ಪ್ರಸ್ತಾವ ಸಿದ್ಧ ಪಡಿಸಲಾಗುವುದು. 58 ಮನೆಗಳನ್ನು ಸ್ಥಳಾಂತರಿಸಲಾಗುವುದು ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

**(56 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಂಗಾಳದ ಕವಿ, ಬಂಕಿಮಚಂದ್ರರು ರಚಿಸಿದ, 'ವಂದೇ ಮಾತರಂ' ರಾಷ್ಟ್ರೀಯ ಗೀತೆಗೆ, 150 ವರ್ಷಗಳು ಇಂದಿಗೆ ಪೂರ್ಣಗೊಂಡವು. ಕೇಂದ್ರ ಸಂಸ್ಕೃತಿ ಸಚಿವಾಲಯ, ರಾಷ್ಟ್ರೀಯ ಗೀತೆ 'ವಂದೇ ಮಾತರಂ', 150 ವರ್ಷಗಳ ಇತಿಹಾಸ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ, ಅಂಚೆ ಚೀಟಿ ಮತ್ತು ನಾಣ್ಯ ಬಿಡುಗಡೆ ಆಯೋಜಿಸಿದೆ. ದೇಶಾದ್ಯಂತ 150 ಸ್ಥಳಗಳಲ್ಲಿ, ವರ್ಷವಿಡೀ ಆಯೋಜಿತ, ವಿಶೇಷ ಕಾರ್ಯಕ್ರಮಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು ಬೆಳಗ್ಗೆ 9.45ಕ್ಕೆ, ಹೊಸ ದಿಲ್ಲಿಯಲ್ಲಿ ಚಾಲನೆ ನೀಡಲಿದ್ದಾರೆ. ರಾಷ್ಟ್ರವ್ಯಾಪಿ ಕಾರ್ಯಕ್ರಮ, 2026ರ ನವೆಂಬರ್ 7ರ ವರೆಗೆ ಮುಂದುವರಿಯಲಿದೆ.

<><><>

ಬೆಂಗಳೂರಿನ ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ, 400 ಜನ, ವಂದೇ ಮಾತರಂ ಸಾಮೂಹಿಕ ಗೀತ ಗಾಯನ ಪ್ರಸ್ತುತಪಡಿಸಲಿದ್ದಾರೆ.

<><><>

ಕಲಬುರಗಿ, ಗದಗ, ಬಾಗಲಕೋಟೆ, ಚಿತ್ರದುರ್ಗ, ದಕ್ಷಿಣಕನ್ನಡ, ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲೂ, ವಂದೇ ಮಾತರಂ, ಸಾಮೂಹಿಕ ಗಾಯನ ನಡೆಯಲಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ವಂದೇ ಮಾತರಂ, ಸ್ವಾತಂತ್ರ್ಯ ಸಂಗ್ರಾಮದ ಮೂಲಮಂತ್ರವಾಗಿತ್ತು ಎಂದಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 73 ಸೆಕೆಂದುಗಳು

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಹೆಗ್ಗೋಡಿನ ಭೀಮನಕೋಣೆ–ಹೊನ್ನೇಸರದ, ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಯೋಗದಲ್ಲಿ, ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ, ಇಂದಿನಿಂದ ಮೂರು ದಿನಗಳ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ ಹಾಗೂ ಕರಕುಶಲ ಕಾರ್ಯಾಗಾರ,

ಆಯೋಜಿಸಿದೆ. ಇಂದು ಬೆಳಗ್ಗೆ 11ಕ್ಕೆ, ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಚಾಲನೆ ನೀಡಲಿದ್ದಾರೆ. ಜವಳಿ ಇಲಾಖೆಯ ಅಭಿವೃದ್ಧಿ ಆಯುಕ್ತರಾದ ಕೆ.ಜ್ಯೋತಿ, ಚನ್ನಪಟ್ಟಣ ಕ್ರಾಫ್ಟ್ ಪಾರ್ಕ್‌ನ, ಸಿ.ಇ.ಒ. ಶ್ರೀಕಲಾ ಕಡಿದಾಳು ಅತಿಥಿಗಳಾಗಿ, ಭಾಗವಹಿಸಲಿದ್ದಾರೆ.

<><><>

ಚರಕ ಕುರಿತ "ದಿ ಚರಕ ಸ್ಟೋರಿ" ಕಾಫಿ ಟೇಬಲ್ ಪುಸ್ತಕವನ್ನು ಲೇಖಕಿ, ಸಾಧನಾ ರಾವ್ ಅವರು ಬಿಡುಗಡೆ ಮಾಡುವರು. ಚರಕದ ಸಂಸ್ಥಾಪಕರು, ಹಿರಿಯ ರಂಗಕರ್ಮಿ ಪ್ರಸನ್ನ ಅವರು, ಪಾಲ್ಗೊಳ್ಳಲಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ, ಚರಕ ಮೇಳದ ಕುರಿತು ಮಾಹಿತಿ ನೀಡಿದ್ದಾರೆ, ಚರಕದ ಅಧ್ಯಕ್ಷೆ, ಹೆಗ್ಗೋಡಿನ ಮಹಾಲಕ್ಷ್ಮೀ.

<><><>

ಮಹಾಲಕ್ಷ್ಮೀ ಧ್ವನಿ 30 ಸೆಕೆಂದುಗಳು

<><><>

ಇಂದು ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ. ಹೆಚ್ಚುತ್ತಿರುವ ಕ್ಯಾನ್ಸರ್ ರೋಗದ ಬಗ್ಗೆ, ಜಾಗೃತಿ ಮೂಡಿಸಿ, ತಡೆಗಟ್ಟುವಿಕೆ, ಆರಂಭಿಕ ಹಂತದಲ್ಲಿ ಪತ್ತೆ ಮತ್ತು ಚಿಕಿತ್ಸೆ ಪಡೆಯುವ ಬಗ್ಗೆ, ಪ್ರೇರೇಪಿಸುವ ಗುರಿ ಹೊಂದಿದೆ.

<><><>

ವಿಕಿರಣಶೀಲತೆಯನ್ನು ಕಂಡುಹಿಡಿದ, ಕ್ಯಾನ್ಸರ್ ಚಿಕಿತ್ಸೆಯ ಮೇಲೆ, ಆಳವಾದ ಪ್ರಭಾವ ಬೀರಿದ, ನೊಬೆಲ್ ಪ್ರಶಸ್ತಿ ವಿಜೇತ, ಮೇಡಮ್ ಮೇರಿ ಕ್ಯೂರಿಯವರ, ಜನ್ಮ ದಿನದ ಸ್ಮರಣಾರ್ಥ, ಕ್ಯಾನ್ಸರ್ ಅನ್ನು, ಸಾರ್ವಜನಿಕ ಆರೋಗ್ಯ ಆದ್ಯತೆಯಾಗಿ ಪರಿಹರಿಸುವ, ಭಾರತದ ಬದ್ಧತೆಯನ್ನು, ಕ್ಯಾನ್ಸರ್ ಜಾಗೃತಿ ದಿನ ಪ್ರತಿಬಿಂಬಿಸಲಿದೆ.

ಪ್ರತಿ ವರ್ಷ 8 ಲಕ್ಷ ಜನರಲ್ಲಿ, ಕ್ಯಾನ್ಸರ್ ರೋಗ ಲಕ್ಷಣಗಳನ್ನು, ಪತ್ತೆ ಹಚ್ಚಲಾಗುತ್ತಿದೆ.

ಎಲ್ಲ ಬಗೆಯ ಕ್ಯಾನ್ಸರ್‌ಗಳಲ್ಲಿ, ಶೇಕಡ 35 ರಿಂದ 50 ಪುರುಷರು ಬಾಧಿತರಾಗಿದ್ದರೆ, ಮಹಿಳೆಯರಲ್ಲಿ ಶೇಕಡ 17 ರಷ್ಟು ಪ್ರಮಾಣ ಲೆಕ್ಕಿಸಲಾಗಿದೆ.

ತಂಬಾಕು ಹಾಗೂ ಸಿಗಾರೆಟ್ ಸೇರಿದಂತೆ, ಇತರೆ ಉತ್ಪನ್ನಗಳು, ಮಾದಕ ವಸ್ತು ಮತ್ತು ಮದ್ಯ ವ್ಯಸನ, ಜೀವನಶೈಲಿ ರೋಗಗಳು, ಕ್ಯಾನ್ಸರ್‌ಗೆ ತಿರುಗುವ ಬಗ್ಗೆ, ಜನ ವ್ಯಸನ ಮುಕ್ತರಾಗುವಂತೆ, ಪ್ರೇರೇಪಿಸಲು ಈ ದಿನವನ್ನು ಮೀಸಲಿಡಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲಿಕರು, ಕಬ್ಬು ಬೆಳೆಗಾರರ ಜೊತೆ, ಇಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ, ಮಹತ್ವದ ಸಭೆ.

- ಮೈಸೂರು ಜಿಲ್ಲೆಯಲ್ಲಿ, 91 ಮಕ್ಕಳು, ಅಪೌಷ್ಟಿಕತೆಯಿಂದ ಬಳಲಿಕೆ; ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರ, ಕಳವಳ.
- 'ವಂದೇ ಮಾತರಂ' ರಾಷ್ಟ್ರೀಯ ಗೀತೆಗೆ, 150 ವ ´ೞ ಪೂರ್ಣ; ರಾಷ್ಟ್ರವ್ಯಾಪಿ ವರ್ಷಪೂರ್ತಿ ಕಾರ್ಯಕ್ರಮಕ್ಕೆ, ಇಂದು ಚಾಲನೆ.
- ಇಂದು, ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>